ರಾತ್ರಿ ಇದನ್ನ ಖಚಿತಪಡಿಸಿಕೊಂಡೆ. ಇದರೊಳಕ್ಕೆ ಹೇಗೆ ಬಂತು, ಚೆಂಗಪ್ಪ?"

ಅಘಾತಕ್ಕೊಳಗಾದವನಂತೆ ಕಂಡ ಚೆಂಗಪ್ಪ, ಆಳಿನೊಂದಿಗೆ ಮೊಸಳೆ ನೋಡಿಕೊಳ್ಳುವ ಬದ್ರಿಯನ್ನು ಕರೆತರುವಂತೆ ಹೇಳಿದ. ಆಳು ಕೂಡಲೇ ಧಾವಿಸಿ, ಕೆಲ ಕ್ಷಣಗಳಲ್ಲೇ ವ್ಯಕ್ತಿಯೊಬ್ಬನೊಂದಿಗೆ ಪ್ರತ್ಯಕ್ಷನಾದ... ನೇಪಾಳಿ ಚಹರೆಯ ಆಸಾಮಿ! ನನಗೆ ತಕ್ಷಣ ನೆನಪಾಯಿತು. ಅಂಗಡಿಯಾತ ನಮಗೆ ತನ್ನ ಮೊಬೈಲಿನಲ್ಲಿ ತೋರಿಸಿದ ಮನುಷ್ಯ!!

ಪೊಲೀಸರನ್ನು ನೋಡುತ್ತಲೇ ಆತನ ಮೊಗದ ಬಣ್ಣ ಬದಲಾಯಿತು. ಮಿಂಚಿನ ಗತಿಯಲ್ಲಿ ಆತ ಅಲ್ಲಿಂದ ಕಾಲು ಕೀಳಬೇಕೆನ್ನುವಷ್ಟರಲ್ಲಿ ಡಿಸೋಜ ರಿವಾಲ್ವರ್ ಎಳೆದು ಆತನೆದುರು ಹಿಡಿದ. ಚೆಂಗಪ್ಪ ಆತನ ಕತ್ತಿನ ಪಟ್ಟಿ ಹಿಡಿದ.

ಅಷ್ಟರಲ್ಲಿ, ಅಲ್ಲಿಗೆ ವರ್ಷಿಣಿ ಧಾವಿಸಿ ಬಂದಳು. ಆಕೆಯ ಬೆನ್ನಿಗೇ ಸೋಮಯ್ಯನ ಸವಾರಿಯೂ ಆಗಮಿಸಿತು. ನನಗೆ ಸೋಜಿಗವೆನಿಸಿತು. ಅವರಿಬ್ಬರು ಇಲ್ಲಿಗೆ ಯಾಕೆ ಬಂದರು? ನಾವಿಲ್ಲಿರೋದನ್ನು ಹೇಳ್ದೋರು ಯಾರು? ನನ್ನ ಪ್ರಶ್ನೆಗೆ ಉತ್ತರವೆಂಬಂತೆ ಕರಮಚಂದ ಮಾತಿಗಾರಂಭಿಸಿದ,

"ಇವರಿಬ್ಬರನ್ನು ಇಲ್ಲಿಗೆ ಬರಹೇಳಿದವನು ನಾನು. ಅವರಿಗೆ ನಾನೊಂದು ಚಿತ್ರ ಕಳಿಸಿದೆ. ಅದು ಕಾಲಿಯಾ ಎನ್ನುವ ಆಸಾಮಿಯದ್ದು. ಕ್ರಚಸ್ ಹಿಡಿದು ನಡೆಯುವ ಒಂಟಿ ಕಾಲಿನ ಆಸಾಮಿ! ಮತ್ತು ತಕ್ಷಣ ಸರೀಸೃಪ ಇರಿಸಿದ ಜಾಗಕ್ಕೆ ಬನ್ನಿ ಅಂತ ಸಂದೇಶ ಹಾಕಿದೆ. ಅವರು ಬಂದೇ ಬರುತ್ತಾರೆ ಅಂತ ಗೊತ್ತಿತ್ತು ಯಾಕೆಂದರೆ ಇಬ್ಬರಿಗೂ ಕಾಲಿಯಾ ಗೊತ್ತು! ಇರಲಿ, ಮೋಹಿತನ ಚರವಾಣಿ ಇಲ್ಲಿ ಹೇಗೆ ಬಂತು ಅಂತ ಹೇಳ್ತೀನಿ. ಸಂಜೆ ಪಾರ್ಟಿಗೆ ಹೊರಟಿದ್ದ ಮೋಹಿತನಿಗೆ ಫೋನು ಬಂತು. ಕರೆ ಮಾಡಿದವನು ಕಾಲಿಯಾ. ತಕ್ಷಣ ಮನೆಯ ಹಿಂಭಾಗಕ್ಕೆ ಬಾ ಅಂದಿದ್ದ. ಅವ್ನು ಗುಜರಾತಿನಿಂದ ವಸೂಲಿಗಾಗಿ ಬಂದ ಆಸಾಮಿ. ಅವನ ಕರೆ ನೋಡಿ ಮೋಹಿತನಿಗೆ ಭಯವಾಯಿತು. ಆಗಲೇ ವರ್ಷಿಣಿ ಪರ್ಸು ಮರೆತಿದ್ಯಾ ಅಂತ ಕೇಳಿದ್ಲು. ಅದು ಮೋಹಿತನಿಗೆ ಒಳ್ಳೆಯದಾಯ್ತು. ಆ ನೆಪದಲ್ಲಿ ತರಾತುರಿಯಿಂದ ಹಿಂದಿರುಗಿದ. ಅವನು ಪರ್ಸು ಮರೆತಿದ್ದೇ ಆಗಿದ್ರೆ, ಮನೆಯ ಬೀಗ ತೆಗೆದಿದ್ದರಬೇಕಿತ್ತು. ಅದೊಂದು ಕೇವಲ ನೆಪವಷ್ಟೆ. ಕಾಲಿಯಾನನ್ನು ಹೇಗಾದ್ರೂ ಸಾಗಹಾಕಬೇಕು ಅಂತ ಮೋಹಿತ ಹೋಗಿರಬೇಕು. ಆಮೇಲೆ ಅವರಿಬ್ಬರ ನಡುವೆ ಮಾತಾಗಿದೆ. ಜಗಳವೂ ಆಯ್ತು. ಕಾಲಿಯಾ ಮೋಹಿತನ ಕೊಲೆ ಮಾಡಲು ಉದ್ದೇಶಿಸಿದ್ದ. ಅದಕ್ಕಾಗಿ ಅವನು ಬದ್ರಿಯನ್ನು ಉಪಯೋಗಿಸಿ, ಮೊಸಳೆಯೊಂದಿಗೇ ಬಂದಿದ್ದ. ಕಾಲಿಯಾನ ಯೋಚನೆ ಮೋಹಿತನನ್ನು ಮೊಸಳೆ ಬಾಯಿಗೆ ಒಪ್ಪಿಸಿಬಿಡೋದು. ಹೆಣವೂ ಸಿಕ್ಕೋಲ್ಲ. ಯಾರಿಗೂ ಗೊತ್ತಾಗೋಲ್ಲ. ಆದ್ರೆ ಅಲ್ಲಿ ಲೆಕ್ಕಾಚಾರ ತಪ್ಪಿತು. ಹೊಡೆದಾಟದಲ್ಲಿ ಮೋಹಿತ ಜಾರಿ, ಪ್ರಪಾತದತ್ತ ಉರುಳಿದ. ಮೋಹಿತನ ಮೊಬೈಲು ಪೆಟ್ಟಿಗೆಯೊಳಗೆ ಎಗರಿ ಬಿತ್ತು. ಬಹುಶಃ ಬದ್ರಿ ಅದನ್ನ ಗಮನಿಸಿಲ್ಲ. ಹಾಗಾಗಿ ಅದು ಪೆಟ್ಟಿಗೆಯಲ್ಲೇ ಇತ್ತು. ಕಾಲಿಯಾ ಹಿಂದಕ್ಕುರುಳಿ, ಪೆಟ್ಟಿಗೆಯೊಳಕ್ಕೆ ಬಿದ್ದ. ಅಲ್ಲಿ ಮೊಸಳೆ ತಕ್ಷಣ ಆತನ ಕಾಲು ಹಿಡಿಯಿತು! ಮೊಸಳೆ ಆತನನ್ನು ಪೂರ್ತಿಯಾಗಿ ನುಂಗಿರಲೂಬಹುದು. ಇಲ್ಲದೇ ಇದ್ರೆ, ದೇಹದ ಶೇಷಗಳನ್ನು ಬದ್ರಿ ವಿಲೇವಾರಿ ಮಾಡಿರಬೇಕು..."

ಬದ್ರಿ ಮುಖ ವಿವರ್ಣವಾಯ್ತು. ಕಾಲಿಯಾನ ದೇಹದ ಉಳಿದ ಭಾಗವನ್ನು ಕಾಡಿನಲ್ಲಿ ಒಂದೆಡೆ ಧಪನ ಮಾಡಿರುವುದಾಗಿ ಒಪ್ಪಿಕೊಂಡ. ಕಾಲಿಯಾ ತನಗೆ ಎರಡು ಲಕ್ಷ ನೀಡಿದ್ದು, ಯಾರಿಗೂ ಗೊತ್ತಾಗದಂತೆ ದೊಡ್ಡ ಮೊಸಳೆಯೊಂದನ್ನು ಮೃಗಾಲಯದಿಂದ ಹೊರಗೊಯ್ದೆ ಎಂದು ಆತ ತಪ್ಪೊಪ್ಪಿಕೊಂಡ.